ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 15-12-2002.

# *ಸಮಯ ಪ್ರಮಾಣ ಲಕ್ಷ್ಯ ಮತ್ತು ಲಕ್ಷಣದ ಸಮಾನತೆಯ ಮೂಲಕ ತಂದೆಯ ಸಮಾನರಾಗಿ*

(समय प्रमाण लक्ष्य और लक्षण की समानता द्वारा बाप समान बनो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾ ನಾಲ್ಕೂ ಕಡೆಯ ಎಲ್ಲಾ ಸ್ವಮಾನಧಾರಿ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಈ ಸಂಗಮದಲ್ಲಿ  ಮಕ್ಕಳಾದ ತಮಗೆ ಯಾವ ಸ್ವಮಾನ ಸಿಗುತ್ತದೆ, ಇದಕ್ಕಿಂತ ದೊಡ್ಡ ಸ್ವಮಾನ ಇಡೀ ಕಲ್ಪದಲ್ಲಿ ಯಾವುದೇ ಆತ್ಮನಿಗೆ ಪ್ರಾಪ್ತಿ ಆಗಲು ಸಾಧ್ಯವಿಲ್ಲ, ಎಷ್ಟು ದೊಡ್ಡ ಸ್ವಮಾನವಾಗಿದೆ. ಇದನ್ನು ತಿಳಿದಿದ್ದೀರಾ? ಸ್ವಮಾನದ ನಶೆ ಎಷ್ಟು ದೊಡ್ಡದಿದೆ, ಇದು ನೆನಪಿನಲ್ಲಿ ಇರುತ್ತದೆಯೇ? ಸ್ವಮಾನದ ಮಾಲೆ ಬಹಳ ದೊಡ್ಡದಾಗಿ ಇರುತ್ತದೆ. ಒಂದೊಂದು ಮಣಿಯನ್ನು ಎಣಿಸುತ್ತಾ ಹೋಗಿ ಮತ್ತು ಸ್ವಮಾನದ ನಶೆಯಲ್ಲಿ ಲವಲೀನರಾಗಿ, ಈ ಸ್ವಮಾನ ಅರ್ಥಾತ್ ಬಿರುದುಗಳು ಸ್ವಯಂ ಬಾಪ್‌ದಾದಾರವರ ಮೂಲಕ ಸಿಕ್ಕಿದೆ. ಪರಮಾತ್ಮನ ಮುಖಾಂತರ ಸ್ವಮಾನ ಪ್ರಾಪ್ತಿಯಾಗಿದೆ. ಆದ್ದರಿಂದ ಈ ಸ್ವಮಾನದ ಆತ್ಮಿಕ ನಶೆಯನ್ನು ಅಲುಗಾಡಿಸಲು ಯಾರಿಗೂ ಶಕ್ತಿ ಇಲ್ಲ ಏಕೆಂದರೆ ಸರ್ವ ಶಕ್ತಿವಂತನ ಮೂಲಕ ಈ ಸ್ವಮಾನವು ಪ್ರಾಪ್ತಿಯಾಗಿದೆ. ಬಾಪ್‌ದಾದಾ ಇಂದು ಅಮೃತವೇಳೆಯಲ್ಲಿ ಇಡೀ ವಿಶ್ವದ ಎಲ್ಲಾ ಮಕ್ಕಳ ಕಡೆಗೆ ಸುತ್ತು ಹಾಕಿ ಪ್ರತಿಯೊಬ್ಬ ಮಗುವಿನ ಸ್ಮೃತಿಯಲ್ಲಿ ಎಷ್ಟು ಸ್ವಮಾನದ ಮಾಲೆ ಹಾಕಲ್ಪಟ್ಟಿದೆ ಎಂದು ನೋಡಿದರು. ಮಾಲೆಯನ್ನು ಧಾರಣೆ ಮಾಡುವುದು ಅರ್ಥಾತ್ ಸ್ಮೃತಿಯ ಮೂಲಕ ಆ ಸ್ಥಿತಿಯಲ್ಲಿ ಸ್ಥಿತರಾಗುವುದು. ಅಂದಾಗ ಈ

ಸ್ಮೃತಿಯ ಸ್ಥಿತಿ ಎಲ್ಲಿಯವರೆಗೆ ಇರುತ್ತದೆ ಎಂದು ತಮ್ಮನ್ನು ತಾವು ಪರಿಶೀಲನೆ ಮಾಡಿಕೊಳ್ಳಿ. ಸ್ವಮಾನದ ನಿಶ್ಚಯ ಮತ್ತು ಅದರ ಆತ್ಮಿಕ ನಶೆ ಎರಡರ ಸಮತೋಲನ ಎಷ್ಟು ಇರುತ್ತದೆ? ಎಂದು ಬಾಪ್‍ದಾದಾ ನೋಡುತ್ತಿದ್ದರು. ನಿಶ್ಚಯ ಅರ್ಥಾತ್ ಜ್ಞಾನಪೂರ್ಣರಾಗುವುದು ಮತ್ತು ಆತ್ಮಿಕ ನಶೆ ಅರ್ಥಾತ್ ಶಕ್ತಿಶಾಲಿ ಆಗುವುದು. ಜ್ಞಾನಪೂರ್ಣರಲ್ಲೂ ಸಹ ಎರಡು ಪ್ರಕಾರದವರನ್ನು ನೋಡಿದೆವು – ಒಂದನೆಯದು ಜ್ಞಾನಪೂರ್ಣ. ಎರಡನೆಯದು ಜ್ಞಾನಸ್ವರೂಪ ಅಂದಾಗ ನಿಮ್ಮನ್ನು ನೀವೇ ಕೇಳಿಕೊಳ್ಳಿ - ನಾನು ಯಾರು? ಬಾಪ್‍ದಾದಾರವರಿಗೆ ತಿಳಿದಿದೆ - ಮಕ್ಕಳ ಲಕ್ಷ್ಯ ಬಹಳ ಶ್ರೇಷ್ಠವಾಗಿದೆ, ಲಕ್ಷ್ಯ ಶ್ರೇಷ್ಠವಿದೆಯಲ್ಲವೇ, ಶ್ರೇಷ್ಠವಾಗಿದೆಯೇ? ಎಲ್ಲರೂ ತಂದೆಯ ಸಮಾನನಾಗುತ್ತೇವೆ ಎಂದು ಹೇಳುತ್ತೀರಿ ಅಂದಾಗ ಹೇಗೆ ತಂದೆ ಶ್ರೇಷ್ಠಾತಿಶ್ರೇಷ್ಠವಾಗಿದ್ದಾರೆಯೋ ಹಾಗೆಯೇ ತಂದೆಯ ಸಮಾನರಾಗುವ ಲಕ್ಷ್ಯ ಎಷ್ಟು ಶ್ರೇಷ್ಠವಾಗಿದೆ! ಲಕ್ಷ್ಯವನ್ನು ನೋಡಿ ಬಾಪ್‍ದಾದಾ ಬಹಳ ಖುಷಿ ಪಡುತ್ತಾರೆ ಆದರೆ.... ಆದರೆ ಹೇಳಲೇನು? ಅದರೆ ಏನು? ಶಿಕ್ಷಕಿಯರೇ ಹೇಳುವುದೇ? ಡಬಲ್ ವಿದೇಶಿಯರೇ ಆದರೆ ಏನು, ಅದನ್ನು ಕೇಳುತ್ತೀರಾ? ತಿಳಿದಿರಬಹುದಲ್ಲವೇ? ಬಾಪ್‍ದಾದಾ ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಾಗಿರಲು ಬಯಸುತ್ತಾರೆ. ಈಗ ನಿಮ್ಮೊಂದಿಗೆ ನೀವೇ ಕೇಳಿಕೊಳ್ಳಿ- ಲಕ್ಷ್ಯ ಮತ್ತು ಲಕ್ಷಣ ಅರ್ಥಾತ್ ಪ್ರತ್ಯಕ್ಷ ಸ್ಥಿತಿ ಸಮಾನವಾಗಿದೆಯೇ? ಏಕೆಂದರೆ ಲಕ್ಷ್ಯ ಮತ್ತು ಲಕ್ಷಣ ಸಮಾನವಾಗುವುದು ಇದೇ ತಂದೆಯ ಸಮಾನರಾಗುವುದಾಗಿದೆ. ಸಮಯ ಪ್ರಮಾಣ ಈ ಸಮಾನತೆಯನ್ನು ಸಮೀಪ ತನ್ನಿ.

ವರ್ತಮಾನ ಸಮಯ ಬಾಪ್‍ದಾದಾ ಮಕ್ಕಳ ಒಂದು ಮಾತನ್ನು ನೋಡ ಬಯಸುವುದಿಲ್ಲ. ಕೆಲವು ಮಕ್ಕಳು ಭಿನ್ನ-ಭಿನ್ನ ಪ್ರಕಾರದ ತಂದೆಯ ಸಮಾನರಾಗುವ ಪರಿಶ್ರಮ ಪಡುತ್ತಾರೆ. ತಂದೆಯ ಪ್ರೀತಿಯ ಮುಂದೆ ಪರಿಶ್ರಮ ಪಡುವ ಆವಶ್ಯಕತೆ ಇಲ್ಲ. ಎಲ್ಲಿ ಪ್ರೀತಿ ಇದೆಯೋ ಅಲ್ಲಿ ಪರಿಶ್ರಮವಿಲ್ಲ. ಉಲ್ಟಾ ನಶೆಯು ದೇಹಾಭಿಮಾನದ ಸ್ವಭಾವವಾಗಿದೆ. ಅದು ಸ್ವಾಭಾವಿಕವಾಗಿದೆ. ದೇಹಾಭಿಮಾನದಲ್ಲಿ ಬರಲು ಪುರುಷಾರ್ಥ ಮಾಡಬೇಕೇ? 63 ಜನ್ಮ ಪುರುಷಾರ್ಥ ಮಾಡಿದ್ದಿರಾ? ಸ್ವಾಭಾವಿಕವಾಗಿದೆ, ಸ್ವಭಾವವಾಗಿದೆ. ಈಗಲೂ ಸಹ ಆಗಾಗ ಇದನ್ನೇ ಹೇಳುತ್ತೀರಿ - ದೇಹಿಗೆ ಬದಲಾಗಿ ದೇಹದಲ್ಲಿ ಬಂದುಬಿಡುತ್ತೀರಿ. ಹೇಗೆ ದೇಹಾಭಿಮಾನ ಸ್ವಾಭಾವಿಕ ಸ್ವಭಾವವಾಗಿದೆಯೋ ಹಾಗೆಯೇ ಈಗ ದೇಹೀ ಅಭಿಮಾನಿ ಸ್ಥಿತಿಯೂ ಸಹ ಸ್ವಾಭಾವಿಕವಾಗಿ ಮತ್ತು ಸ್ವಭಾವವಾಗಲಿ, ಸ್ವಭಾವದ ಬದಲಾವಣೆ ಮಾಡುವುದು ಕಷ್ಟವಾಗುತ್ತದೆ. ಈಗಲೂ ಸಹ ಹೇಳುತ್ತೀರಲ್ಲವೇ - ಆಗಾಗ ಹೇಳುತ್ತೀರಿ - ನನ್ನ ಭಾವವಲ್ಲ, ಸ್ವಭಾವವಾಗಿದೆ. ಆ ಸ್ವಭಾವವನ್ನು ಸ್ವಾಭಾವಿಕ ಮಾಡಿಕೊಂಡಿದ್ದೀರಿ, ಮತ್ತು ತಂದೆಯ ಸಮಾನವಾಗುವ ಸಂಸ್ಕಾರವನ್ನು(ಸ್ವಭಾವವನ್ನು) ಸ್ವಾಭಾವಿಕ ಮಾಡಿಕೊಳ್ಳಲು ಸಾಧ್ಯವಿಲ್ಲವೇ! ಉಲ್ಟಾ ಸ್ವಭಾವದ ವಶವಾಗುತ್ತೀರಿ ಮತ್ತು ಯಥಾರ್ಥ ಸ್ವಭಾವ ತಂದೆಯ ಸಮಾನರಾಗುವುದು, ಇದರಲ್ಲಿ ಪರಿಶ್ರಮವೇಕೆ? ಬಾಪ್‍ದಾದಾ ಈಗ ಎಲ್ಲಾ ಮಕ್ಕಳ ದೇಹೀ ಅಭಿಮಾನಿಯಾಗಿರುವ ಸ್ವಾಭಾವಿಕ ಸ್ವಭಾವವನ್ನು ನೋಡಬಯಸುತ್ತಿದ್ದಾರೆ. ಬ್ರಹ್ಮಾ ತಂದೆಯನ್ನು ನೋಡಿದಿರಲ್ಲವೇ ನಡೆದಾಡುತ್ತಾ-ತಿರುಗಾಡುತ್ತಾ ಯಾವುದೇ ಕಾರ್ಯವನ್ನು ಮಾಡುತ್ತಾ ದೇಹೀ ಅಭಿಮಾನಿ ಸ್ಥಿತಿ ಸ್ವಾಭಾವಿಕವಾಗಿತ್ತು.

ಬಾಪ್‍ದಾದಾ ಸಮಾಚಾರ ಕೇಳಿದರು-ಇತ್ತೀಚೆಗೆ ದಾದಿಯರು ವಿಶೇಷವಾಗಿ ಈ ಆತ್ಮಿಕ ವಾರ್ತಾಲಾಪವನ್ನು ಮಾಡುತ್ತಾರೆ - ಫರಿಶ್ತಾ ಸ್ಥಿತಿ, ಕರ್ಮಾತೀತ ಅವಸ್ಥೆ, ತಂದೆಯ ಸಮಾನ ಅವಸ್ಥೆ ಸ್ವಾಭಾವಿಕ ಹೇಗೆ ಮಾಡಿಕೊಳ್ಳುವುದು? ಸ್ವಾಭಾವಿಕವಾಗಬೇಕು ಎಂದು ವಾರ್ತಾಲಾಪ ಮಾಡುತ್ತೀರಲ್ಲವೇ! ಮಾಡುತ್ತೀರಾ ದಾದಿರವರಿಗೂ ಸಹ ಇದು ಮತ್ತೆ-

ಮತ್ತೆ ಬರುತ್ತದೆಯಲ್ಲವೇ, ಫರಿಶ್ತೆಗಳು ಆಗಬೇಕು, ಕರ್ಮಾತೀತರಾಗಬೇಕು, ತಂದೆಯ ಪ್ರತ್ಯಕ್ಷತೆ ಆಗಬೇಕು. ಅಂದಾಗ ಫರಿಶ್ತೆ ಆಗುವುದು ಅಥವಾ ನಿರಾಕಾರಿ ಕರ್ಮಾತೀತ ಸ್ಥಿತಿಯನ್ನು ಪಡೆಯುವ ವಿಶೇಷ ಸಾಧನವಾಗಿದೆ - ನಿರಹಂಕಾರಿ ಆಗುವುದು. ನಿರಹಂಕಾರಿಯೇ ನಿರಾಕಾರಿ ಆಗಲು ಸಾಧ್ಯ. ಆದ್ದರಿಂದ ತಂದೆಯು ಬ್ರಹ್ಮಾರವರ ಮುಖಾಂತರ ಕೊನೆಯ ಮಂತ್ರ ನಿರಾಕಾರಿಯ ಜೊತೆ ನಿರಹಂಕಾರಿ ಎಂದು ಹೇಳಿದ್ದಾರೆ. ಕೇವಲ ತನ್ನ ದೇಹ ಅಥವಾ ಅನ್ಯರ ದೇಹದಲ್ಲಿ ಮುಳುಗುವುದನ್ನೆ ದೇಹದ ಅಹಂಕಾರ ಅಥವಾ ದೇಹಾಭಿಮಾನ ಎಂದು ಹೇಳುವುದಿಲ್ಲ. ದೇಹದ ಅಹಂಕಾರ, ದೇಹದ ಅಭಿಮಾನ ಎರಡು ಇವೆ ತನ್ನ ದೇಹ ಅಥವಾ ಅನ್ಯರ ದೇಹದ ಪರಿವೆಯಲ್ಲಿ ಇರುವುದು, ಸೆಳೆತದಲ್ಲಿ ಇರುವುದು, ಇದರಲ್ಲಂತೂ ಮೆಜಾರಿಟಿ ತೇರ್ಗಡೆ ಆಗಿದ್ದೀರಿ. ಯಾರು ಪುರುಷಾರ್ಥದ ಲಗನ್ನಿನ್ನಲ್ಲಿ ಇರುತ್ತಾರೆಯೋ, ಸತ್ಯ ಪುರುಷಾರ್ಥಿಗಳು ಈ ಹೊರ ರೂಪದ ದೇಹಾಭಿಮಾನದಿಂದ ಭಿನ್ನರಾಗಿದ್ದಾರೆ, ಆದರೆ ದೇಹಭಾನದ ಅನೇಕ ಸೂಕ್ಷ್ಮ ರೂಪಗಳು ಇವೆ. ಇದರ ಲಿಸ್ಟನ್ನು ಪರಸ್ಪರ ಸೇರಿ ತೆಗೆಯಬೇಕು. ಬಾಪ್‌ದಾದಾ ಇಂದು ಹೇಳುವುದಿಲ್ಲ. ಈ ದಿನ ಇಷ್ಟು ಸೂಚನೆಯು ಬಹಳಷ್ಟು ಆಯಿತು. ಏಕೆಂದರೆ ಎಲ್ಲರೂ ಬುದ್ಧಿವಂತರಾಗಿದ್ದೀರಿ. ತಮಗೆ ಎಲ್ಲಾ ಗೊತ್ತಿದೆ ತಾನೇ! ಒಂದುವೇಳೆ ಎಲ್ಲರನ್ನು ಕೇಳಿದರೆ, ಎಲ್ಲರೂ ಬಹಳ ಬುದ್ದಿವಂತಿಕೆಯಿಂದ ಹೇಳುತ್ತೀರಿ ಆದರೆ ಬಾಪ್‌ದಾದಾ ಚಿಕ್ಕ ಸಹಜ ಪುರುಷಾರ್ಥವನ್ನು ಹೇಳುತ್ತಾರೆ ಸದಾ ಮನ-ವಚನ-ಕರ್ಮ ಸಂಬಂಧ-ಸಂಪರ್ಕದಲ್ಲಿ ಕೊನೆಯ ಮೂರೂ ಮಂತ್ರಗಳ ಶಬ್ದವನ್ನು ಸದಾ ನೆನಪು ಇಟ್ಟುಕೊಳ್ಳಿ. ಸಂಕಲ್ಪ ಮಾಡಿದಾಗ ಪರಿಶೀಲನೆ ಮಾಡಿಕೊಳ್ಳಿ - ಮಹಾಮಂತ್ರದಿಂದ ಕೂಡಿದೆಯೇ? ಹಾಗೆಯೇ ವಚನ, ಕರ್ಮ ಎಲ್ಲದರಲ್ಲಿ ಕೇವಲ ಮೂರು ಶಬ್ದವನ್ನು ನೆನಪು ಇಟ್ಟುಕೊಳ್ಳಿ ಹಾಗೂ ಸಮಾನತೆಯನ್ನು ತನ್ನಿರಿ. ಇದು ಸಹಜವಲ್ಲವೇ? ಇಡೀ ಮುರಳಿಯನ್ನು ನೆನಪು ಮಾಡಿ ಎಂದು ಹೇಳುವುದಿಲ್ಲ, ಮೂರು ಶಬ್ದ. ಈ ಮಹಾಮಂತ್ರವು ಸಂಕಲ್ಪವನ್ನೂ ಸಹ ಶ್ರೇಷ್ಠ ಮಾಡುತ್ತದೆ. ವಚನದಲ್ಲಿ ನಿರ್ಮಾಣತೆಯನ್ನು ತರುತ್ತದೆ. ಕರ್ಮದಲ್ಲಿ ಸೇವಾಭಾವವನ್ನು ತರುತ್ತದೆ. ಸಂಬಂಧದಲ್ಲಿ ಸದಾ ಶುಭಭಾವನೆ, ಶ್ರೇಷ್ಠ ಕಾಮನೆಯ ವೃತ್ತಿಯನ್ನು ತಯಾರು ಮಾಡಿಸುತ್ತದೆ. ಬಾಪ್‌ದಾದಾ ಸೇವೆಯ ಸಮಾಚಾರವನ್ನೂ ಸಹ ಕೇಳುತ್ತಾರೆ, ಸೇವೆಯಲ್ಲಿ ಇತ್ತೀಚೆಗೆ ಭಿನ್ನ-ಭಿನ್ನ ಕೋರ್ಸ್ ಮಾಡುತ್ತೀರಿ ಆದರೆ ಈಗ ಒಂದು ಕೋರ್ಸ್ ಉಳಿದಿದೆ. ಅದು ಯಾವುದೆಂದರೆ ಆತ್ಮನಲ್ಲಿ ಯಾವ ಶಕ್ತಿ ಬೇಕೋ ಆ ಶಕ್ತಿಯ ಕೋರ್ಸ್ ಕೊಡುವುದು. ಶಕ್ತಿಯನ್ನು ತುಂಬುವ ಕೋರ್ಸ್. ವಚನದ ಮೂಲಕ ಹೇಳುವ ಕೋರ್ಸಲ್ಲ, ವಚನದ ಜೊತೆ-ಜೊತೆಗೆ ಶಕ್ತಿಯ ಕೋರ್ಸ್ ಇರಲಿ. ಇದರಿಂದ ಚೆನ್ನಾಗಿದೆ-ಚೆನ್ನಾಗಿದೆ ಎಂದು ಹೇಳುವುದಲ್ಲ. ಆದರೆ ಚೆನ್ನಾಗಿ ಆಗಬೇಕು. ಇಂದು ನನಗೆ ಶಕ್ತಿಯ ಹನಿ ಸಿಕ್ಕಿದೆ ಎಂದು ವರ್ಣಿಸಬೇಕು. ಹನಿಯಷ್ಟು ಅನುಭವವೂ ಆ ಆತ್ಮರಿಗೆ ಬಹಳಷ್ಟು ಆಗುತ್ತದೆ. ಕೋರ್ಸ್ ಕೊಡಿ ಆದರೆ ಮೊದಲು ತಮಗೆ ಕೋರ್ಸನ್ನು ಕೊಟ್ಟುಕೊಂಡು ನಂತರ ಹೇಳಿ. ಬಾಪ್‌ದಾದಾರವರು ಏನು ಬಯಸುತ್ತಾರೆ? ಎಂದು ಕೇಳಿಸಿಕೊಂಡಿದ್ದೀರಾ? ಲಕ್ಷ್ಯ ಮತ್ತು ಲಕ್ಷಣವನ್ನು ಸಮಾನ ಮಾಡಿ. ಎಲ್ಲರ ಲಕ್ಷ್ಯವನ್ನು ನೋಡಿ ಬಾಪ್‌ದಾದಾ ಬಹಳ-ಬಹಳ ಖುಷಿ ಪಡುತ್ತಾರೆ. ಈಗ ಕೇವಲ ಸಮಾನ ಮಾಡಿ, ಆಗ ತಂದೆಯ ಸಮಾನ ಸಹಜವಾಗಿ ಆಗುತ್ತೀರಿ. ಬಾಪ್‌ದಾದಾರವರು ಮಕ್ಕಳನ್ನು ಸಮಾನಕ್ಕಿಂತಲೂ ಶ್ರೇಷ್ಠರು, ತಮಗಿಂತಲೂ ಶ್ರೇಷ್ಠ ದೃಷ್ಟಿಯಲ್ಲಿ ನೋಡುತ್ತಾರೆ. ಸದಾ ಬಾಪ್‌ದಾದಾ ಮಕ್ಕಳನ್ನು ಶಿರದ ಕಿರೀಟ ಎಂದು ಹೇಳುತ್ತಾರೆ ಅಂದಮೇಲೆ ಕಿರೀಟವು ಶಿರಕ್ಕಿಂತಲೂ ಮೇಲಿರುತ್ತದೆ ತಾನೇ! ಶಿಕ್ಷಕಿಯರು ಶಿರದ ಕಿರೀಟವಲ್ಲವೇ?

ಶಿಕ್ಷಕಿಯರು ನಿಂತುಕೊಳ್ಳಿ- ನೋಡಿ ಎಷ್ಟೊಂದು ಶಿಕ್ಷಕಿಯರು ಇದ್ದಾರೆ. ನೋಡಿ. ಒಂದು ಗ್ರೂಪಿನಲ್ಲಿಯೇ ಇಷ್ಟೊಂದು ಶಿಕ್ಷಕಿಯರು ಇದ್ದರೆ ಪ್ರತಿಯೊಂದು ಗ್ರೂಪಿನಲ್ಲಿ ಎಷ್ಟು ಶಿಕ್ಷಕಿಯರು ಇರಬಹುದು! ಶಿಕ್ಷಕಿಯರು ಬಾಪ್‌ದಾದಾರವರ ಒಂದು ಆಸೆಯನ್ನು ಪೂರ್ಣ ಮಾಡುವ ಸಂಕಲ್ಪ ಮಾಡಿದ್ದಾರೆ ಆದರೆ ಇನ್ನೂ ಮುಂದೆ ತಂದಿಲ್ಲ. ಯಾವುದು ಎಂದು ಗೊತ್ತಿದೆಯೇ? ಗೊತ್ತಿದೆಯೇ ಯಾವುದು ಎಂದು? ಮೊದಲನೆಯದಾಗಿ ಬಾಪ್‌ದಾದಾ ಹೇಳಿದ್ದಾರೆ ವಾರಸುದಾರರ ಮಾಲೆಯನ್ನು ತಯಾರು ಮಾಡಿ. ವಾರುಸುದಾರರ ಮಾಲೆ, ಸಾಧಾರಣ ಮಾಲೆಯಲ್ಲ. ಎರಡನೆಯದು - ಸಂಬಂಧ-ಸಂಪರ್ಕದವರನ್ನು ಮೈಕ್ ಮಾಡಿ. ನೀವು ಭಾಷಣವನ್ನು ಮಾಡಬೇಡಿ ಆದರೆ ಅವರನ್ನು ತಮ್ಮ ಕಡೆಯಿಂದ ಮಾಧ್ಯಮವನ್ನಾಗಿ ಮಡಿಕೊಳ್ಳಿ. ಮಾಧ್ಯಮ ಏನು ಮಾಡುತ್ತದೆ? ಶಬ್ದವನ್ನು ಹರಡುತ್ತದೆ ತಾನೇ! ಉಲ್ಟಾ ಅಥವಾ ಸುಲ್ಟಾ. ಮೈಕನ್ನು ಆ ರೀತಿ ತಯಾರು ಮಾಡಿ ಅವರು ಮಾಧ್ಯಮದ ಸಮಾನ ಪ್ರತ್ಯಕ್ಷತೆಯ ಶಬ್ದವನ್ನು ಹರಡಲಿ. ತಾವು ಹೇಳುತ್ತೀರಿ ಭಗವಂತ ಬಂದಿದ್ದಾರೆ, ಭಗವಂತ ಬಂದಿದ್ದಾರೆ ಎಂದು ಆದರೆ ಅದನ್ನು ಸಾಧಾರಣ ಎಂದು ತಿಳಿಯುತ್ತಾರೆ. ಆದರೆ ತಮ್ಮ ಕಡೆಯಿಂದ ಅನ್ಯರು ಹೇಳಲಿ, ಅಧಿಕಾರವುಳ್ಳವರು ಹೇಳಲಿ, ಮೊದಲು ತಾವು ಅವರಿಗೆ ಶಕ್ತಿಯರ ರೂಪದಲ್ಲಿ ಪ್ರತ್ಯಕ್ಷವಾಗಬೇಕು. ಯಾವಾಗ ಶಕ್ತಿಯರು ಪ್ರತ್ಯಕ್ಷವಾಗುತ್ತಾರೆಯೋ ಆಗ ತಂದೆಯು ಪ್ರತ್ಯಕ್ಷವಾಗುತ್ತದೆ. ಅಂದಮೇಲೆ ಮಾಡಿ, ಮಾಧ್ಯಮವನ್ನು [ಮೀಡಿಯಾ] ತಯಾರು ಮಾಡಿ. ಮಾಡಿದ್ದೀರಾ? ಮಾಲೆಯನ್ನು ಬಿಡಿ, ಬಳೆಯನ್ನಾದರೂ ಮಾಡಿದ್ದೀರಾ? ಕೈ ಎತ್ತಿ ಈ ರೀತಿ ಯಾರು ತಯಾರು ಮಾಡಿದ್ದೀರಿ? ಬಾಪ್‌ದಾದಾ ನೋಡುತ್ತಾರೆ ಯಾವುದನ್ನು ತಯಾರು ಮಾಡಿದ್ದೀರಿ, ಧೈರ್ಯವಂತೂ ಚೆನ್ನಾಗಿದೆ. ಕೇಳಿದಿರಾ ಶಿಕ್ಷಕಿಯರು ಏನು ಮಾಡಿದ್ದೀರಿ? ಶಿವರಾತ್ರಿಯಲ್ಲಿ ವಾರಸುದಾರರನ್ನು ತಯಾರು ಮಾಡಿ, ಮೈಕ್ ತಯಾರು ಮಾಡಿ ಆಗ ಮತ್ತೆ ಮುಂದಿನ ವರ್ಷ ಶಿವರಾತ್ರಿಯಲ್ಲಿ ಎಲ್ಲರ ಮುಖದಿಂದ ಶಿವತಂದೆ ಬಂದಿದ್ದಾರೆ ಎಂಬ ಶಬ್ದವೂ ಹರಡಲಿ. ಈ ರೀತಿ ಶಿವರಾತ್ರಿಯನ್ನು ಆಚರಿಸಿ. ಕಾರ್ಯಕ್ರಮಗಳಂತೂ ಬಹಳ ಚೆನ್ನಾಗಿ ಮಾಡಿದ್ದೀರಿ. ಕಾರ್ಯಕ್ರಮಗಳನ್ನು ಎಲ್ಲರಿಗೂ ತಲುಪಿಸಿದ್ದೀರಲ್ಲವೇ. ಕಾರ್ಯಕ್ರಮಗಳಂತೂ ಚೆನ್ನಾಗಿ ಮಾಡಿದ್ದೀರಿ ಆದರೆ ಪ್ರತಿಯೊಂದು ಕಾರ್ಯಕ್ರಮದಿಂದ ಯಾರಾದರೂ ಮೈಕ್ ತಯಾರಾಗಲಿ, ಯಾರಾದರೂ ವಾರಸುದಾರರು ತಯಾರಾಗಲಿ. ಈ ಪುರುಷಾರ್ಥವನ್ನು ಮಾಡಿ, ಭಾಷಣ ಮಾಡಿ ಹೊರಟು ಹೋದರು, ಈ ರೀತಿ ಅಲ್ಲ. ಇದಂತೂ 60 ವರ್ಷಗಳು ಆಗಿದೆ ಹಾಗೂ 50 ವರ್ಷದ ಸೇವೆಯದನ್ನು ಆಚರಿಸಿದ್ದೀರಿ. ಈಗ ಶಿವರಾತ್ರಿಯ ವಜ್ರ ಮಹೋತ್ಸವವನ್ನು ಆಚರಿಸಿ. ಈ ಎರಡೂ ಪ್ರಕಾರದ ಆತ್ಮರನ್ನು ತಯಾರು ಮಾಡಿ ನಂತರ ನೋಡಿ ನಗಾರಿ ಬಾರಿಸುತ್ತದೆಯೋ ಅಥವಾ ಇಲ್ಲವೋ. ನಗಾರಿಯು ಬಾರಿಸುತ್ತದೆಯೇ? ತಾವಂತೂ ದೇವಿಯರಾಗಿದ್ದೀರಿ, ಸಾಕ್ಷಾತ್ಕಾರ ಮಾಡಿಸುತ್ತೀರಿ. ನಗಾರಿ ಬಾರಿಸುವವರನ್ನು ತಯಾರಿ ಮಾಡಿ. ಅವರು ಪ್ರತ್ಯಕ್ಷವಾಗಿ ಗೀತೆಯನ್ನು ಹಾಡಲಿ ಶಿವಶಕ್ತಿಯರು ಬಂದರು..... ಕೇಳಿದಿರಾ. ಶಿವರಾತ್ರಿಯಲ್ಲಿ ಏನು ಮಾಡುತ್ತೀರಿ. ಹಾಗೆಯೇ ಭಾಷಣ ಮಾಡಿ ಪೂರ್ಣ ಮಾಡಬಾರದು. ನಂತರ ಬಾಬಾ 500 ಲಕ್ಷ ಜನ ಬಂದಿದ್ದರು ಆಗ ಸಂದೇಶ ಕೊಟ್ಟೆವು ಎಂದು ಬರೆಯುತ್ತೀರಿ ಆದರೆ ವಾರಸದಾರರು ಎಷ್ಟಾದರು? ಮೈಕ್ ಎಷ್ಟು ಆದರು, ಈಗ ಈ ಸಮಾಚಾರವನ್ನು ಕೊಡಬೇಕು. ಇಲ್ಲಿಯತನಕ ಏನು ಮಾಡಿದ್ದೀರಿ ಧರಣಿಯನ್ನು ತಯಾರು ಮಾಡಿದ್ದೀರಿ. ಸಂದೇಶ ಕೊಟ್ಟಿದ್ದೀರಿ, ಅದಕ್ಕೆ ಬಾಬಾ ಒಳ್ಳೆಯದು ಎಂದು ಹೇಳುತ್ತಾರೆ. ಆ ಸೇವೆ ವ್ಯರ್ಥವಾಗಿ ಹೋಗಲಿಲ್ಲ. ಸಮರ್ಥವಾಯಿತು. ಪ್ರಜೆಗಳಂತೂ ಆದರು, ರಾಯಲ್ ಪರಿವಾರದವರಾದರು ಆದರೆ ರಾಜಾ-ರಾಣಿಯೂ ಸಹ ಬೇಕು. ರಾಜ್ಯದರ್ಬಾರು ಶೋಭೆಯಿಂದ ಇರಬೇಕು.

ಕೇಳಿದಿರಾ ಶಿವರಾತ್ರಿಯಲ್ಲಿ ಏನು ಮಾಡಬೇಕು. ಪಾಂಡವರು ಕೇಳುತ್ತಿದ್ದೀರಾ. ಕೈ ಎತ್ತಿ. ಗಮನ ಕೊಟ್ಟಿದ್ದೀರಾ. ಒಳ್ಳೆಯದು. ದೊಡ್ಡ- ದೊಡ್ಡ ಮಾಹಾರಥಿಗಳು ಕುಳಿತಿದ್ದಾರೆ. ಒಳ್ಳೆಯದು ಬಾಪ್‌ದಾದಾರವರು ಖುಷಿಯಾಗುತ್ತಾರೆ. ಇದೂ ಸಹ ಅಂತರಾಳದ ಪ್ರೀತಿ ಆಗಿದೆ ಏಕೆಂದರೆ ತಮ್ಮೆಲ್ಲರ ಸಂಕಲ್ಪ ನಡೆಯುತ್ತಿದೆಯಲ್ಲವೇ, ಪ್ರತ್ಯಕ್ಷತೆ ಯಾವಾಗ ಆಗುತ್ತದೆ, ಯಾವಾಗ ಆಗುತ್ತದೆ. ಅಂದಮೇಲೆ ಬಾಪ್‌ದಾದಾರವರೂ ಕೇಳಿಸಿಕೊಳ್ಳುತ್ತಿರುತ್ತಾರೆ. ಮಧುಬನದವರು ಏನು ಕೇಳಿದಿರಿ? ಮಧುಬನದವರು ಕೈಯನ್ನು ಎತ್ತಿ. ಮಧುಬನದವರು ಎದ್ದೇಳಿ, ಮಧುಬನ, ಶಾಂತಿವನ, ಜ್ಞಾನಸರೋವರದವರು ಎಲ್ಲರೂ ಮಧುಬನದ ನಿವಾಸಿಗಳಾಗಿದ್ದಾರೆ. ಒಳ್ಳೆಯದು.

ಮಧುಬನದಿಂದ ನಗಾರಿ ಬಾರಿಸುವುದೋ, ಎಲ್ಲಿಂದ ಬಾರಿಸಲಾಗುತ್ತದೆ? ಎಲ್ಲಿಂದ ಬಾರಿಸುತ್ತದೆ ನಗಾರಿ? ಎಲ್ಲಿಂದ ಬಾರಿಸುತ್ತದೆ? ದೆಹಲಿಯಿಂದ, ಮಧುಬನದಿಂದ ಅಲ್ಲವೇ. ನಾಲ್ಕೂ ಕಡೆಯಿಂದ ಎಂದು ಹೇಳಿರಿ. ಒಂದು ಕಡೆಯಿಂದ ಬಾರಿಸಲಾಗುವುದಿಲ್ಲ. ಮಧುಬನದಿಂದಲೂ ಬಾರಿಸಲಾಗುತ್ತದೆ. ಆಗ ನಾಲ್ಕೂ ಕಡೆಯಿಂದಲೂ ಬಾರಿಸಲಾಗುತ್ತದೆ ಆಗಲೇ ಕುಂಭಕರ್ಣರು ಎಚ್ಚರಗೊಳ್ಳುತ್ತಾರೆ. ಮಧುಬನದವರು ಕೇಳಿದಿರಾ. ಬಹಳ ಒಳ್ಳೆಯದು. ಹೇಗೆ ಸೇವೆಯಲ್ಲಿ ಸುಸ್ತು ಇಲ್ಲದ ರೀತಿಯಲ್ಲಿ ಸೇವೆಯ ಪಾತ್ರವನ್ನು ಮಾಡುತ್ತಿದ್ದೀರಲ್ಲವೇ, ಹಾಗೆಯೇ ಈ ಮನಸಾ ಸೇವೆಯನ್ನು ಮಾಡುತ್ತಾ ಇರಿ. ಕೇವಲ ಕರ್ಮಣಾ ಅಲ್ಲ ಮನಸಾ, ವಾಚಾ, ಕರ್ಮಣಾ ಮೂರೂ ಸೇವೆಗಳನ್ನು ಮಾಡುತ್ತಿದ್ದೀರಿ ಆದರೆ ಇನ್ನಷ್ಟು ಹೆಚ್ಚು ಮಾಡಬೇಕು. ಒಳ್ಳೆಯದು. ಮಧುಬನದವರು ಮರೆತಿಲ್ಲ. ಮಧುಬನದವರು ಯೋಚಿಸುತ್ತಾರೆ - ಬಾಬಾ ಮಧುಬನದಲ್ಲಿ ಬರುತ್ತಾರೆ ಆದರೆ ಮಧುಬನದ ಹೆಸರೇ ಹೇಳುವುದಿಲ್ಲ ಎಂದು, ಮಧುಬನವಂತೂ ಸದಾ ನೆನಪು ಇದ್ದೇ ಇದೆ. ಮಧುಬನ ಇಲ್ಲದಿದ್ದರೆ ಇನ್ನೆಲ್ಲಿ ಬರುತ್ತಾರೆ? ತಾವು ಸೇವಾಧಾರಿಗಳು ಸೇವೆ ಮಾಡದಿದ್ದರೆ ಇವರು ಹೇಗೆ ಊಟ ಮಾಡುತ್ತಾರೆ. ಹೇಗೆ ಇರುತ್ತಾರೆ! ಅಂದಮೇಲೆ ಮಧುಬನದವರನ್ನು ಬಾಪ್‌ದಾದಾರವರೂ ಸಹ ಅಂತರಾಳದಿಂದ ನೆನಪು ಮಾಡುತ್ತಾರೆ ಹಾಗೂ ಆಶೀರ್ವಾದಗಳನ್ನು ನೀಡುತ್ತಾರೆ. ಈಗ ಕುಳಿತುಕೊಳ್ಳಿ, ಸುಸ್ತಾಗುತ್ತೀರಿ. ಶಿಕ್ಷಕಿಯರಂತೂ ಸುಸ್ತಾದರು. ಬಾಪ್‌ದಾದಾರವರು ನಿಂತು ಸುಸ್ತಾಗಿದ್ದನ್ನು ನೋಡಲಿಲ್ಲ. ಡ್ರಿಲ್ ಮಾಡಿದಿರಿ. ಕುಳಿತು-ಕುಳಿತು ಕಾಲು ಹಿಡಿದುಕೊಳ್ಳುತ್ತದೆ, ನಿಂತುಕೊಂಡಿದ್ದು ಸರಿ, ಶಿಕ್ಷಕಿಯರೊಂದಿಗೆ ಪ್ರೀತಿ ಇದೆ. ತಾನೆ. ಮಧುಬನದ ಮೇಲೆಯೂ ಪ್ರೀತಿಯಿದೆ. ಶಿಕ್ಷಕಿಯರೂ ಪ್ರಿಯರು. ಮಧುರಾತಿ ಮಧುರವಾದ ಮಾತೆಯರೊಂದಿಗೂ ಪ್ರೀತಿ ಇದೆ, ಹಾಗೂ ಮಹಾವೀರ ಪಾಂಡವರೊಂದಿಗೂ ಪ್ರೀತಿ ಇದೆ. ಪಾಂಡವರ ವಿನಃ ಗತಿ ಇಲ್ಲ. ಆದ್ದರಿಂದ ಚತುರ್ಭುಜ ರೂಪದ ಮಹಿಮೆ ಜಾಸ್ತಿ ಇದೆ. ಪಾಂಡವ ಹಾಗೂ ಶಕ್ತಿಯರ ಕಂಬೈಂಡ್ ರೂಪ ಚತುರ್ಭುಜ ವಿಷ್ಣು ಆಗಿದೆ.

ಮಾತೆಯರನ್ನು ಎದ್ದು ನಿಲ್ಲಲು ಹೇಳಿದರೆ ಸಭೆಯಲ್ಲಿ ಅರ್ಧ ಜನ ಮಾತೆಯರೇ ಇರುತ್ತಾರೆ. ಮಾತೆಯರು ಎದ್ದು ನಿಲ್ಲಿರಿ. ಮಾತೆಯರು ಬಹಳಷ್ಟು ಜನ ಇದ್ದಾರೆ. ಈಗ ಮಾತೆಯರು ವಸ್ತ್ರದ ಧ್ವಜವನ್ನು ಹಾರಿಸುವುದಲ್ಲ. ಧ್ವಜವನ್ನು ಹಾರಿಸಿ ಭಗವಂತನು ಬಂದಿದ್ದಾರೆ. ಎಚ್ಚರಗೊಳ್ಳಿ, ಎಚ್ಚರಗೊಳ್ಳಿ ಎಂದು ಹೇಳುತ್ತೀರಲ್ಲವೇ. ಆದರೆ ಈಗ ಸತ್ಯವಾದ ಧ್ವನಿಯನ್ನು ವ್ಯಾಪಿಸಿರಿ. ಎಲ್ಲರ ಮನಸ್ಸಿನಿಂದ ಧ್ವನಿಯನ್ನು ಹೊರಹಾಕಿ. ಸತ್ಯವಾದ ಶಿವರಾತ್ರಿಯನ್ನು ಆಚರಿಸಿಕೊಳ್ಳಿರಿ. ಮಾತೆಯರು ಕೇಳಿದ್ದೀರಲ್ಲವೇ ಮನಸ್ಸಿನಿಂದ ತಂದೆಯ ಪ್ರತ್ಯಕ್ಷತೆಯ ಧ್ವಜವನ್ನು ಹಾರಿಸಿರಿ. ಧ್ವಜ ಹಾರಿಸುವುದು ಬರುತ್ತದೆಯಲ್ಲವೇ. ಬುದ್ಧಿಯುಳ್ಳವರು! ಮಾತೆಯರು ಸಹ ಕಡಿಮೆಯಾದವರೇನಲ್ಲ. ಈಗ ಎಲ್ಲರನ್ನು ಎಚ್ಚರಗೊಳಿಸಿ.

ನಿಮ್ಮ ಮಕ್ಕಳು ಕುಂಭಕರ್ಣರಂತೆ ನಿದ್ದೆ ಮಾಡುತ್ತಿದ್ದಾರೆ. ಈಗ ಸಮಯ ಬಂದುಬಿಟ್ಟಿದೆ ಆದ್ದರಿಂದ ಅವರನ್ನು ಎಚ್ಚರಗೊಳಿಸಿ. ತಂದೆ ಬಂದಿದ್ದಾರೆ ಎಂದು ಅವರ ಬಾಯಿಂದಲೂ ಬರಬೇಕು. ಮಾತೆಯರು ಈ ರೀತಿಯಾದ ಶಿವರಾತ್ರಿಯನ್ನು ಆಚರಿಸಿಕೊಳ್ಳಬೇಕು. ಮಾತೆಯರು ಅದ್ಭುತವನ್ನು ಮಾಡಿ ತೋರಿಸಬೇಕು. ಕೈಯನ್ನು ಚೆನ್ನಾಗಿ ಅಲುಗಾಡಿಸುತ್ತಿದ್ದೀರಿ. ಏನು ಸಮಾಚಾರ ಬರುತ್ತದೆಯೋ ಈ ಶಿವರಾತ್ರಿಯಲ್ಲಿ ನೋಡುತ್ತೇನೆ. ಫಂಕ್ಷನ್ ಮಾಡಿಕೊಳ್ಳುತ್ತಿದ್ದೇವೆ ಎಂದು ಅಲ್ಲ ಫಂಕ್ಷನ್ ಮಾಡಿಕೊಳ್ಳಿರಿ ಆದರೆ ಅವರನ್ನು ಕರೆದುಕೊಂಡು ಬರಬೇಕು ಒಳ್ಳೆಯದು. ಮಾತೆಯರು ಬಹಳಷ್ಟು ಜನರಿದ್ದಾರೆ, ಮಾತೆಯರಿಂದಲೇ ಬ್ರಾಹ್ಮಣ ಪರಿವಾರಕ್ಕೆ ಶೋಭೆ ಇದೆ. ಮಾತೆಯರ ವಿಶೇಷತೆ ಏನೆಂದರೆ ಎಂತಹ ಗ್ರಾಮದ ಮಾತೆಯಾರಾದರೂ, ಯಾವ ಸೇವಾಕೇಂದ್ರದಲ್ಲಿ ಮಾತೆಯರ ಸಂಖ್ಯೆ ಹೆಚ್ಚಿರುತ್ತದೆಯೋ ಅಲ್ಲಿ ಭಂಡಾರಿ ಮತ್ತು ಭಂಡಾರ ಸಂಪನ್ನವಾಗಿರುತ್ತದೆ. ಪಾಂಡವರು ಒಬ್ಬರಿದ್ದು ಮಾತೆಯರು 25 ಜನರಿದ್ದರೂ ಸಂಪನ್ನವಾಗಿರುತ್ತದೆ. ಏಕೆಂದರೆ ಹೃದಯ ವಿಶಾಲವಾಗಿರುತ್ತದೆ, ಒಳ್ಳೆಯದು.

ಈಗ ಡಬಲ್ ವಿದೇಶಿಯರು ಎದ್ದು ನಿಲ್ಲಿರಿ! ಡಬಲ್ ವಿದೇಶಿಯರು ಮೀಡಿಯಾ ಗ್ರೂಪನ್ನು ತಯಾರು ಮಾಡುತ್ತೀರಾ? ಯಾರು ತಯಾರು ಮಾಡುತ್ತಿರೋ ಅವರು ಕೈಯನ್ನು ಎತ್ತಿರಿ. 30 ದೇಶಗಳಿಂದ ಬಂದಿದ್ದಾರೆ ಎಂದು ಬಾಪ್‌ದಾದಾ ಕೇಳಿಸಿಕೊಂಡರು. ಕಡಿಮೆಯಲ್ಲಿ ಕಡಿಮೆ 30 ದೇಶಗಳಲ್ಲಿ ಸರ್ವಶಕ್ತಿ ಮಾಧ್ಯಮವನ್ನು ತಯಾರು ಮಾಡುತ್ತಿರಲ್ಲವೇ ಅಕ್ಕಂದಿರು ಏನು ಮಾಡುತ್ತೀರಿ, ಶಕ್ತಿಯರು ಏನು ಮಾಡುತ್ತೀರಿ? ತಂದೆ ಎಂದರೆ ಎಷ್ಟು ಪ್ರೀತಿ ಇದೆಯೋ ನೋಡಿರಿ, ಎಷ್ಟು ಸಮುದ್ರಗಳನ್ನು ದಾಟಿ ಬರುತ್ತಿದ್ದಾರೆ! ಬಾಪ್‌ದಾದಾರವರಿಗೆ ಡಬಲ್ ವಿದೇಶಿಯರ ಬಗ್ಗೆ ಹೆಮ್ಮೆಯನಿಸುತ್ತಿದೆ. ಪ್ರೀತಿ ಅಂತೂ ಎಲ್ಲರ ಮೇಲೆ ಇದೆ ಆದರೆ ಜೊತೆ ಜೊತೆ ತಂದೆಯ ಸಂದೇಶವನ್ನು ನಾಲ್ಕು ಕಡೆ ವ್ಯಾಪಿಸಲು ನಿಮಿತ್ತವಾಗಿದ್ದಾರೆ ಎಂದು ಡಬಲ್ ವಿದೇಶದ ಪ್ರತಿ ಹೆಮ್ಮೆಯೂ ಇದೆ. ಇಲ್ಲದಿದ್ದರೆ ಭಾರತ ದೇಶದ ಅಕ್ಕಂದಿರು ಮೊದಲು ಭಾಷೆಯನ್ನು ಕಲಿತು ನಂತರ ಸಂದೇಶವನ್ನು ಕೊಡಬೇಕಾಗಿ ಬರುತ್ತಿತ್ತು. ಆದರೆ ನೀವು ಮನೆಯಿಂದಲೇ ಉದ್ಧರಣೆಯನ್ನು ಪ್ರಾರಂಭಿಸಿ ತೋರಿಸಿದ್ದೀರಿ. ಈಗ ಕೇವಲ 30 ದೇಶದವರು ಬಂದಿದ್ದಾರೆ ಇನ್ನು ಬಹಳ ದೇಶಗಳಿವೆಯಲ್ಲವೇ? ಆದ್ದರಿಂದ ಬಹಳ ಒಳ್ಳೆಯ ಸಂದೇಶವಾಹಕರಾಗಿದ್ದೀರಿ.

ಒಬ್ಬೊಬ್ಬ ಮಗುವಿನ ವಿಶೇಷತೆಯನ್ನು ನೋಡಿ ಬಾಪ್‌ದಾದಾ ಬಹಳಷ್ಟು ಖುಷಿಪಡುತ್ತಿದ್ದಾರೆ. ಭಾರತ ದೇಶದಲ್ಲಿ ಇರುವವರ ವಿಶೇಷತೆಗಳಲ್ಲಿ ಈಗ ವಿದೇಶಿಯರ ವಿಶೇಷತೆಯ ಲಿಸ್ಟ್ ನ ವಿಷಯ. ನಾವು ಬ್ರಹ್ಮಾ ತಂದೆಯ ಮಕ್ಕಳು ಎಂದು ಡಬಲ್ ವಿದೇಶಿಯರು ಅನುಭವದಿಂದ ಹೇಳುತ್ತಿದ್ದಾರೆ. ಕೇವಲ ಬುದ್ಧಿಯಿಂದ ಅಲ್ಲ, ಮನಸ್ಸಿನಿಂದ ಹೇಳುತ್ತಿದ್ದಾರೆ. ನಾವು ಬ್ರಹ್ಮಕುಮಾರಿ ಕುಮಾರರು. ಮನಸ್ಸಿನಿಂದ ಮತ್ತು ಅನುಭವದಿಂದ ಹೇಳುತ್ತಿದ್ದೀರಲ್ಲವೇ? ಇತರರು ಹೇಳುವುದರಿಂದ ಅಥವಾ ನೀವು ಕೇಳಿಸಿಕೊಳ್ಳುವುದರಿಂದ ಹೇಳುತ್ತಿಲ್ಲ. ಅನುಭವದಿಂದ ಹೇಳುತ್ತಿದ್ದೀರಿ. ಬ್ರಹ್ಮಕುಮಾರಿ ಕುಮಾರರಾಗಿ ಇದ್ದುದರಿಂದ ಆತ್ಮಿಕ ನಶೆಯು ಇದೆಯಲ್ಲವೇ, ನಶೆ ಇದೆಯೇ? ಕೈಯನ್ನು ಅಲುಗಾಡಿಸಿರಿ. ಎಷ್ಟು ನಶೆ ಇದ್ದರೆ ಅಷ್ಟು ವೇಗದಿಂದ ಕೈಯನ್ನು ಅಲುಗಾಡಿಸಿರಿ. ಬ್ರಹ್ಮಕುಮಾರಿ ಕುಮಾರರ ನಶೆ ಎಷ್ಟು ಇದೆ ಎಂಬುದು ಬಾಪ್‌ದಾದಾ ಪರಿಶೀಲಿಸುತ್ತಿದ್ದಾರೆ. ವಿದೇಶಗಳಲ್ಲಿ ಶಿವರಾತ್ರಿ ಹೆಚ್ಚು ಮಾಡುವುದಿಲ್ಲ ಆದರೆ ಜನವರಿ 18 ಮಾಡುತ್ತಾರೆ. ಇಲ್ಲಿ ಹೆಚ್ಚಾಗಿ ಶಿವರಾತ್ರಿಯನ್ನು ಆಚರಿಸಿಕೊಳ್ಳುತ್ತಾರೆ. 18ನೇ ಜನವರಿ ಅಥವಾ ಜನವರಿಯಲ್ಲಿ ಹೆಚ್ಚಾಗಿ ಸೇವೆಯನ್ನು

ವ್ಯಾಪಿಸುತ್ತಿದ್ದೀರಿ. ಇದು ಸಹ ಒಳ್ಳೆಯದೇ, ಇಲ್ಲಿ ಯಾರು ಮೊದಲ ನಂಬರ್ ವಾರಸರನ್ನು, ಮೈಕನ್ನು ತರುತ್ತೀರೋ ನೋಡುತ್ತೇನೆ. ಅವರಿಗೆ ಬೆಳ್ಳಿಯ ಬ್ರಹ್ಮಾ ತಂದೆಯನ್ನು ಕಾಣಿಕೆಯಾಗಿ ಕೊಡುತ್ತಾರೆ. ಉಡುಗೊರೆಯಾಗಿ ಕೊಡುತ್ತೇನೆ. ಭಾರತ ದೇಶದವರಾದರೂ, ವಿದೇಶದವರಾದರೂ ಯಾರು ಕರೆತಂದರೆ ಅವರಿಗೆ ಉಡುಗೊರೆಯು ಲಭಿಸುತ್ತದೆ. ಎಷ್ಟು ಜನ ಸೆಂಟರ್ಸ್ ನವರು ತಂದರೂ ಬಾಪ್‌ದಾದಾರವರ ಹತ್ತಿರ ಖಜಾನೆ ಸಂಪನ್ನವಾಗಿ ಇರುತ್ತದೆ. ಸರಿಯೇ! ಪಾಂಡವರು ಏನು ಮಾಡುತ್ತೀರಿ, ಪಾಂಡವರ ವಿಜಯಕ್ಕೆ ಮಹಿಮೆ ಇದೆ. ನೀವು ಸುಸ್ತಾಗುತ್ತೀರೆಂದು ನಿಲ್ಲಲು ಹೇಳುತ್ತಿಲ್ಲ. ಬಾಪ್‌ದಾದಾ ಪಾಂಡವರ ಮಸ್ತಕದಲ್ಲಿ ಸದಾ ವಿಜಯವನ್ನು ನೋಡುತ್ತಿದ್ದಾರೆ. ಮತ್ತು ವಿಜಯದ ಮಧ್ಯದಲ್ಲಿ ಆತ್ಮವೂ ಹೊಳೆಯುತ್ತಿರುತ್ತದೆ. ಪಾಂಡವರ ಡ್ರಾಮಾನುಸಾರ ಸ್ಮೃತಿ ಚಿಹ್ನೆಯಲ್ಲಿಯೂ ಸಹ ವಿಜಯದ ವರದಾನವು ಲಭಿಸಿಯೇ ಇದೆ. ವಿಜಯೀ ಪಾಂಡವರು ಎಂಬ ಮಹಿಮೆ ಇದೆ. ಆದ್ದರಿಂದ ಪಾಂಡವರು ಯಾವಾಗಲೂ ಯಾವ ವಿಷಯದಲ್ಲಿಯೂ ಸೋಲುವುದಿಲ್ಲ. ಬಾಪ್‌ದಾದಾರವರ ಕೊರಳಹಾರವಾಗಬೇಕು ಆದರೆ ಸೋತು ಹೋಗಬಾರದು. ಯಾವಾಗಲಾದರೂ ಯಾವುದಾದರೂ ವಿಷವು ಬಂದರೆ ನಾವು ಬಾಪ್‌ದಾದಾರವರ ಕೊರಳ ಹಾರವಾಗಿದ್ದೇವೆ. ಸೋಲುವವರಲ್ಲ. ಎಂದು ಹೇಳಿರಿ. ಅಷ್ಟು ಪಕ್ಕಾ ಆಗಿದ್ದೀರಲ್ಲವೇ ಅಥವಾ ಸ್ವಲ್ಪ ಸ್ವಲ್ಪ ಸೋಲಬಾರದು. ವಿಜಯವು ನಿಮ್ಮ ಕೊರಳಹಾರವಾಗಿದೆ. ನೀವು ಬಾಪ್‌ದಾದಾರವರ ಕೊರಳಹಾರವಾಗಿದ್ದೀರಿ. ಸೋಲುವ ಆತ್ಮರೂ ಕೋಟಿಯಲ್ಲಿ ಇದ್ದಾರೆ. ನೀವಲ್ಲ. ನೀವಂತೂ ಕೋಟಿಯಲ್ಲಿ ಕೆಲವರು ಮತ್ತು ಆ ಕೆಲವರಲ್ಲಿ ಕೆಲವರು. ಮಧುಬನದಲ್ಲಿ ಇರುವ ಪಾಂಡವರಿಗೆ ನಶೆ ಇದೆಯಲ್ಲವೇ? ನಶೆ ಇದೆ, ವಿಜಯದ ನಶೆ ಇರಬೇಕು ಇತರ ನಷೆಗಳಲ್ಲ. ಒಳ್ಳೆಯದು. ಪಾಂಡವ ಭವನದಲ್ಲಿ ಮೆಜಾರಿಟಿ ಪಾಂಡವರು ಇದ್ದಾರೆ. ಈ ಪಾಂಡವರು ಇಲ್ಲದಿದ್ದರೆ ನಿಮ್ಮೆಲ್ಲರಿಗೂ ಮಧುವನದಲ್ಲಿ ಇರುವ ಮಜಾ ಇರುವುದಿಲ್ಲ. ಏಕೆಂದರೆ ಮಧುಬನ ನಿವಾಸಿಯರು ಬಲಿಹಾರವಾಗುವ ನಿಮ್ಮೆಲ್ಲರನ್ನೂ ಮೋಜಿನಿಂದ ಇಡುತ್ತಿದ್ದಾರೆ. ತಿನ್ನಿಸುತ್ತಿದ್ದಾರೆ ಮತ್ತು ಹಾರಿಸುತ್ತಿದ್ದಾರೆ. ಬಾಪ್‌ದಾದಾರವರಿಗೆ ಮಧುಬನ ನಿವಾಸಿಯರು ಅಮೃತ ವೇಳೆಯಿಂದ ಸ್ಮೃತಿ ಬರುತ್ತಿದ್ದಾರೆ ಇಲ್ಲಿದ್ದರೂ, ಮೇಲೆ ಕುಳಿತಿದ್ದರೂ ಕೆಲವರು ತಮ್ಮ ವಿಧಿಗಳಲ್ಲಿ ಇದ್ದಾರೆ. ಆದರೆ ನಾಲ್ಕು ಕಡೆ ಇರುವ ಮದುಬನ ನಿವಾಸಿಯರೆಲ್ಲರನ್ನು ಬಾಪ್‌ದಾದಾ ಅಮೃತ ವೇಳೆಯಿಂದ ನೆನಪು ಮಾಡುತ್ತಿದ್ದಾರೆ.

ಒಳ್ಳೆಯದು, ಈಗ ಉತ್ತರ ಪ್ರದೇಶದ ಸೇವಾದಾರರು ಎದ್ದು ನಿಲ್ಲಿರಿ. ಇವರಂತೂ (ಮಧುಬನ ನಿವಾಸಿಯರು) ಸದಾ ಸೇವಾಧಾರರು ನೀವಂತೂ ಒಮ್ಮೊಮ್ಮೆ ಸೇವಾಧಾರರಾಗಿ ಬರುತ್ತಿರಿ. ಉತ್ತರ ಪ್ರದೇಶದ ಸೇವಾಧಾರರು ಎದ್ದು ನಿಲ್ಲಿರಿ. ಪ್ರತಿಯೊಬ್ಬರು ನಿಮಗಿರುವ ಒಂದು ಅವಕಾಶದಲ್ಲಿ ಅವಿನಾಶಿ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಂಡಿದ್ದೀರಿ. ಸ್ವಲ್ಪ ಸಮಯದ ಸೇವೆಯಿಂದ ಅನೇಕ ಜನ್ಮಗಳ ಪುಣ್ಯದ ರೇಖೆಯನ್ನು ಅಥವಾ ಭಾಗ್ಯವನ್ನು ತಯಾರು ಮಾಡಿಕೊಂಡಿದ್ದೀರಿ. ಅರ್ಥಾತ್ ಬುದ್ಧಿ ಉಳ್ಳವರೇ ತಾನೇ! ಒಂದು ಜನ್ಮದಲ್ಲಿ ಅನೇಕ ಜನ್ಮಗಳಿಗಾಗಿ ತಯಾರು ಮಾಡಿಕೊಂಡಿದ್ದೀರಿ. ಸೇವಾಧಾರರನ್ನು ನೋಡಿ ಬಾಪ್‌ದಾದಾ ವಿಶೇಷವಾಗಿ ಖುಷಿಪಡುತ್ತಿದ್ದಾರೆ ಏಕೆ? ಏಕೆ ಖುಷಿ ಪಡುತ್ತಾರೆ? ಹಳೆಯವರಿಗೆ ನೆನಪಿದ್ದೇ ಇರುತ್ತದೆ. ಬ್ರಹ್ಮ ಬಾಬಾ ಇರುವಾಗ ಬಾಬಾ ಸಹಿ ಹೇಗೆ ಮಾಡುತ್ತಿದ್ದರು ವಿಶ್ವ ಸೇವಾಧಾರಿ ಎಂದು ಮತ್ತು ನಿರಾಕಾರ ತಂದೆಯೂ ಏಕೆ ಅವತರಿಸಿದ್ದಾರೆ? ಸೇವಾಧಾರಿಯಾಗಿ ಬಂದಿದ್ದಾರಲ್ಲವೇ? ಆದ್ದರಿಂದ ಬಾಪ್‌ದಾದಾರವರಿಗೆ ಸೇವಾಧಾರರು ಬಹಳ ನೆನಪಿಗೆ ಬರುತ್ತಾರೆ. ಪ್ರಿಯವಾಗಿಯೂ ಅನಿಸುತ್ತಾರೆ. ಇಲ್ಲಿಯೂ ಸಹ ಮೆಜಾರಿಟಿ ಆತ್ಮರಿಗೆ ಪ್ರೋಗ್ರಾಮ್ ಅನುಸಾರವಾಗಿ ಯಜ್ಞ ಸೇವೆಯ ಪುಣ್ಯವು ಲಭಿಸುತ್ತದೆ. ಇದು ಸಹ ಒಳ್ಳೆಯದೇ,

ಟೀಚರ್ಸ್ ಎಲ್ಲರೂ ಚೆನ್ನಾಗಿದ್ದೀರಲ್ಲವೇ? ಉತ್ತರಪ್ರದೇಶದ ಸೇವಾಧಾರಿ ಟೀಚರ್ಸ್ ಚೆನ್ನಾಗಿದ್ದೀರಲ್ಲವೇ? ಬಹಳ ಒಳ್ಳೆಯದು. ಬಾಪ್‌ದಾದಾ ಟೀಚರ್ಸ್ ಅನ್ನು ಸದಾ ಸಹಯೋಗಿ ಶಿಕ್ಷಕರು ಎಂಬ ದೃಷ್ಟಿಯಿಂದ ನೋಡುತ್ತಾರೆ. ಒಳ್ಳೆಯದು.

ಮೊದಲು ಮಕ್ಕಳು ಎದ್ದು ನಿಲ್ಲಿರಿ. ಬಾಲಕರು ಮಹಾತ್ಮರಲ್ಲವೇ! ನೋಡಿರಿ, ಮಕ್ಕಳಿಗೆ ಸಹ ಎಷ್ಟು ಪ್ರೀತಿ ಇದೆಯೋ! ಮಕ್ಕಳು ಅರ್ಥಾತ್ ಪ್ರತಿಜ್ಞೆ ಮಾಡುವವರು. ಇಂದಿನ ಪ್ರೆಸಿಡೆಂಟ್ ಗಳು ಸಹ ಮಕ್ಕಳ ಮಾತನ್ನು ಅಂಗೀಕರಿಸುತ್ತಿದ್ದಾರೆ. ಬಾಪ್‌ದಾದಾ ಸಹ ಮಕ್ಕಳನ್ನು ಪ್ರೀತಿಸುತ್ತಾರೆ. ಮಕ್ಕಳೆಲ್ಲರೂ ಚೆನ್ನಾಗಿದ್ದೀರಲ್ಲವೇ ಚೆನ್ನಾಗಿದ್ದರೆ ಕೈಯನ್ನು ಎತ್ತಿರಿ. ಬಹಳ ಒಳ್ಳೆಯದು. ಸದಾ ಬಾಬಾ, ಬಾಬಾ, ಬಾಬಾ ಎಂದು ಹೇಳುತ್ತಾ ಇರಿ. ಸ್ಮೃತಿಯಲ್ಲಿರಿ.

ಕುಮಾರಿಯರು ಎದ್ದು ನಿಲ್ಲಿರಿ, ಕುಮಾರಿಯರು ಸಹ ಬಹಳಷ್ಟು ಜನರಿದ್ದಾರೆ. ಆದರೆ ನೀವು ಎಂಥಹ ಕುಮಾರಿಯರು? 21 ಜನ್ಮದವರನ್ನು ಉದ್ಧರಿಸುವ ಕುಮಾರಿಯರೇ ತಾನೇ. ಅಥವಾ ಬಂಧನಗಳು ಇರುವ ಕುಮಾರಿಯಾರೇ? ಕುಮಾರಿ ಅರ್ಥಾತ್ 21 ಜನ್ಮಗಳನ್ನು ಶ್ರೇಷ್ಠವಾಗಿ ತಯಾರು ಮಾಡುವವರು. ಕುಮಾರಿಯರ ಮಹಿಮೆಯೂ ಇದೆ. ಉದ್ಯೋಗ ಅಥವಾ ಸಂಬಂಧಿಕರ ಬಂಧನದಲ್ಲಿ ಇದ್ದರೂ ಕುಮಾರಿ ಅರ್ಥಾತ್ ಶಕ್ತಿ. ನಿಮ್ಮ ಯೋಗಶಕ್ತಿಯಿಂದ ನಿಮ್ಮನ್ನು ನೀವು ನಿರ್ಬಂಧನರನ್ನಾಗಿ ಮಾಡಿಕೊಳ್ಳಬಹುದು. ಉದ್ಯೋಗ ಮಾಡಬಾರದು ಎಂದು ಬಾಪ್‌ದಾದಾ ಹೇಳುತ್ತಿಲ್ಲ. ಆದರೆ ಉದ್ಯೋಗ ಮಾಡುತ್ತಲೂ ಡಬಲ್ ಉದ್ಯೋಗ ಅರ್ಥಾತ್ ಸೇವೆಯನ್ನು ಮಾಡಿರಿ. ವಿದೇಶದವರ ಇದೇ ವಿಶೇಷತೆ ಇದೆ. ವಿದೇಶದಲ್ಲಿರುವವರು ಉದ್ಯೋಗವನ್ನು ಸಹ ಮಾಡುತ್ತಾರೆ ಮತ್ತು ಸೆಂಟರ್ ಅನ್ನು ಸಹ ಸಂಬಾಲನೆ ಮಾಡುತ್ತಾರೆ. ಈ ವಿಶೇಷತೆಯನ್ನು ಬಾಪ್‌ದಾದಾರವರು ನೋಡಿದರು. ಆದರಿಂದ ಬಾಪ್‌ದಾದಾ ಅಂತಹ ಮಕ್ಕಳಿಗೆ ಡಬಲ್ ಶುಭಾಶಯಗಳು. ಪರಿಸ್ಥಿತಿಗಳ ಪ್ರಭಾವದಿಂದ ಉದ್ಯೋಗ ಮಾಡಬೇಕಾಗಿದ್ದರೂ ಅದಕ್ಕೆ ಬಾಪ್‌ದಾದಾ ಬೇಡ ಎಂದು ಹೇಳುವುದಿಲ್ಲ. ಆದರೆ ಸಮಾನತೆಯನ್ನು ಇಟ್ಟುಕೊಳ್ಳಿರಿ ಆದರೆ ಇಂತಹ ಕುಮಾರಿಯರೇನಾ? ಸೆಂಟರ್ ಅನ್ನು ತೆಗೆದರೆ ಸಂಬಾಲನೆ ಮಾಡುತ್ತೀರಾ? ಸೆಂಟರ್ ತೆಗೆಯಬಹುದೇ? ಹಾಗೆಯೇ ಎಂದು ಹೇಳುವವರು ಕೈಯನ್ನು ಎತ್ತಿರಿ. ಸೆಂಟರ್ ಅನ್ನು ತೆಗೆಯಿರಿ ಎಂದು ಆಜ್ಞೆ ಲಭಿಸಿದರೆ ಸೆಂಟರ್ ಗೆ ಹೋಗುತ್ತೀರಾ? ಕೆಲವು ಜನ ಮಾತ್ರ ಕೈಯನ್ನು ಎತ್ತುತ್ತಾರೆ. ನೋಡಿಕೊಳ್ಳಿರಿ ಟಿ.ವಿಯಲ್ಲಿ ನಿಮ್ಮ ಫೋಟೋ ಬಂದುಬಿಡುತ್ತಿದೆ. ಒಳ್ಳೆಯದು. ಸಹಾಯವು ಲಭಿಸುತ್ತದೆ. ಒಳ್ಳೆಯದು. ಶುಭಾಶಯಗಳು. ಸೆಂಟರ್ ಗೆ ಬರಲು ಶುಭಾಶಯಗಳು. ಕುಮಾರರು ಪಾಂಡವರಲ್ಲಿ ಬಂದುಬಿಟ್ಟಿದ್ದೀರಾ, ಕುಮಾರಿಯರಂತೂ ಸೆಂಟರ್ ಅನ್ನು ಸಂಭಾಳಿಸಬೇಕು ಮತ್ತು ಕುಮಾರರು ಮೈಕ್ ಅನ್ನು ಸಹ ತಯಾರು ಮಾಡಬಹುದು. ಕುಮಾರರು ಪ್ರಭುತ್ವದವರನ್ನು ಸಹ ಎಚ್ಚರಗೊಳಿಸಬಹುದು. ಕುಮಾರರು ಅದ್ಭುತವನ್ನು ಮಾಡಿ ತೋರಿಸುತ್ತಾರೆ. ಆ ದಿನವೂ ಬರಲಿದೆ ಆದ್ದರಿಂದ ಕುಮಾರರನ್ನು ಎಚ್ಚರಗೊಳಿಸಿ. ನೀವು ಸಹ ಕುಮಾರರು, ನಾವು ಸಹ ಕುಮಾರರು ಬನ್ನಿರಿ. ನಾವು ನಿಮಗೆ ಕಥೆಯನ್ನು ಹೇಳುತ್ತೇವೆ ಎಂದು ಅವರನ್ನು ಎಚ್ಚರಗೊಳಿಸಿ, ಒಳ್ಳೆಯದು. ಬಾಪ್‌ದಾದಾ ಯಾವ ಆತ್ಮಿಕ ವ್ಯಾಯಾಮವನ್ನು ಕೊಟ್ಟಿದ್ದಾರೆಯೋ ಅದನ್ನು ಇಡೀ ದಿನದಲ್ಲಿ ಎಷ್ಟು ಬಾರಿ ಮಾಡುತ್ತೀರಿ ಮತ್ತು ಎಷ್ಟು ಸಮಯದಲ್ಲಿ ಮಾಡುತ್ತೀರಿ. ನಿರಾಕಾರಿ ಮತ್ತು ಫರಿಸ್ತಾ. ತಂದೆ ಮತ್ತು ಅಣ್ಣ ಈಗೀಗ ನಿರಾಕಾರಿ, ಈಗೀಗ ಫರಿಶ್ತಾ ಸ್ವರೂಪ ಎರಡರಲ್ಲೂ ದೇಹಭಾನವಿಲ್ಲ. ಅಂದಾಗ ದೇಹಭಾನದಿಂದ ಭಿನ್ನವಾಗಬೇಕಾದರೆ ಈ ಆತ್ಮಿಕ ವ್ಯಾಯಾಮವನ್ನು ಕರ್ಮ ಮಾಡುತ್ತಲೂ ತಮ್ಮ ಕೆಲಸವನ್ನು ಮಾಡುತ್ತಲೂ ಒಂದು ಸೆಕೆಂಡಿನಲ್ಲಿ

ಅಭ್ಯಾಸವನ್ನು ಮಾಡಬಹುದು. ಈಗ ಈ ಒಂದು ಸ್ವಾಭಾವಿಕ ಅಭ್ಯಾಸವನ್ನು ಮಾಡಿಕೊಳ್ಳಿ. ಈಗೀಗ ನಿರಾಕಾರಿ, ಈಗೀಗ ಫರಿಶ್ತೆಗಳಾಗಿ. ಒಳ್ಳೆಯದು. (ಬಾಪ್‌ದಾದಾ ಡ್ರಿಲ್ ಮಾಡಿಸಿದರು)

***ಈ ರೀತಿ ನಿರಂತರ ಭವ! ನಾಲ್ಕೂ ಕಡೆಯ ಬಾಪ್‌ದಾದಾರವರ ನೆನಪಿನಲ್ಲಿ ಮಗ್ನರಾಗಿರುವಂತಹ ತಂದೆಯ ಸಮಾನರಾಗುವ ಲಕ್ಷ್ಯ ಮತ್ತು ಲಕ್ಷಣದಲ್ಲಿ ಸಮಾನರಾಗುವಂತಹ, ಯಾರು ಮೂಲೆ-ಮೂಲೆಯಲ್ಲಿ ವಿಜ್ಞಾನದ ಸಾಧನಗಳಿಂದ ಹಗಲು ಹಾಗೂ ರಾತ್ರಿ ಜಾಗೃತರಾಗಿ ಕುಳಿತಿದ್ದಾರೆ. ಆ ಮಕ್ಕಳಿಗೂ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ಶುಭಾಷಯ ಮತ್ತು ಮನಸ್ಸಿನ ಆಶೀರ್ವಾದವನ್ನು ಕೊಡುತ್ತಿದ್ದಾರೆ. ಬಾಪ್‌ದಾದಾ ಎಲ್ಲರ ಮನಸ್ಸಿನಲ್ಲಿ ಈ ಸಮಯದಲ್ಲಿ ದಿಲಾರಾಮಾ ತಂದೆಯ ನೆನಪು ಸಮಾವೇಶ ಆಗಿದೆಯೆಂದು ತಿಳಿದುಕೊಂಡಿದ್ದಾರೆ. ಪ್ರತಿಯೊಬ್ಬರೂ ಮೂಲೆ-ಮೂಲೆಯಲ್ಲಿ ಕುಳಿತಿರುವ ಮಕ್ಕಳಿಗೆ ಬಾಪ್‌ದಾದಾ ಪ್ರತ್ಯೇಕವಾಗಿ ಹೆಸರಿನಿಂದ ನೆನಪು, ಪ್ರೀತಿಯನ್ನು ಕೊಟ್ಟಿದ್ದಾರೆ. ಹೆಸರುಗಳ ಮಾಲೆಯನ್ನು ನೆನಪು ಮಾಡಿದರೆ ರಾತ್ರಿಯು ಪೂರ್ಣವಾಗುತ್ತದೆ. ಬಾಪ್‌ದಾದಾ ಎಲ್ಲಾ ಮಕ್ಕಳಿಗೂ ನೆನಪನ್ನು ಕೊಡುತ್ತಾರೆ. ಅವರು ಪುರುಷಾರ್ಥದಲ್ಲಿ ಯಾವುದೇ ನಂಬರ್ ಇರಲಿ ಆದರೂ ಬಾಪ್‌ದಾದಾ ಸದಾ ಪ್ರತಿಯೊಬ್ಬ ಮಕ್ಕಳಿಗೂ ಶ್ರೇಷ್ಠ ಸ್ವಮಾನದ ನೆನಪು, ಪ್ರೀತಿಯನ್ನು ಕೊಡುತ್ತಾರೆ ಮತ್ತು ನಮಸ್ತೆ ಮಾಡುತ್ತಾರೆ. ನೆನಪು, ಪ್ರೀತಿಯನ್ನು ಕೊಡುವ ಸಮಯದಲ್ಲಿ ಬಾಪ್‌ದಾದಾರವರ ನಾಲ್ಕೂ ಕಡೆಯ ಪ್ರತಿಯೊಬ್ಬ ಮಕ್ಕಳಿಗೆ ನೆನಪನ್ನು ಕೊಡುತ್ತಿದ್ದಾರೆ. ಯಾವುದೇ ಒಂದು ಮಗುವು ಯಾವುದೇ ಮೂಲೆಯಲ್ಲಿ, ಹಳ್ಳಿಯಲ್ಲಿ, ನಗರದಲ್ಲಿ, ದೇಶದಲ್ಲಿ, ವಿದೇಶದಲ್ಲಿ ಎಲ್ಲಿಯೇ ಇದ್ದರೂ ಬಾಪ್‌ದಾದಾರವರಿಗೆ ಸ್ವಮಾನವನ್ನು ನೆನಪು ಮಾಡಿಸುತ್ತಾ ನೆನಪು, ಪ್ರೀತಿಯನ್ನು ಕೊಡುತ್ತಿದ್ದಾರೆ. ಎಲ್ಲರೂ ನೆನಪು, ಪ್ರೀತಿಯ ಅಧಿಕಾರಿಗಳಾಗಿದ್ದೀರಿ ಏಕೆಂದರೆ ಬಾಬಾ ಎಂದಿರಿ ಮತ್ತು ನೆನಪು, ಪ್ರೀತಿಯ ಅಧಿಕಾರಿಗಳಾಗಿರಿ. ತಾವೆಲ್ಲಾ ಸನ್ಮುಖದಲ್ಲಿರುವಂತಹವರಿಗೆ ಬಾಪ್‌ದಾದಾ ಸ್ವಮಾನದ ಮಾಲಾಧಾರೀ ಸ್ವರೂಪದಲ್ಲಿ ನೋಡುತ್ತಿದ್ದಾರೆ. ಎಲ್ಲರಿಗೂ ತಂದೆಯ ಸಮಾನ ಸ್ವಮಾನ ಸ್ವರೂಪದಲ್ಲಿ ನೆನಪು, ಪ್ರೀತಿ ಹಾಗೂ ನಮಸ್ತೆ.***

ದಾದಿಯವರ ಜೊತೆ – ಆರೋಗ್ಯವಾಗಿದ್ದೀರಲ್ಲವೇ, ಈಗ ಯಾವುದೇ ಖಾಯಿಲೆಯಿಲ್ಲವೇ. ಎಲ್ಲವೂ ಓಡಿಹೋಯಿತೇ. ಅದು ಕೇವಲ ತೋರಿಸುವುದಕ್ಕೋಸ್ಕರ ಬಂದಿತು. ಎಲ್ಲರೂ ನೋಡುತ್ತಿದ್ದರು. ಅದು ನಮ್ಮ ಬಳಿ ಬಂದರೂ ದೊಡ್ಡ ಮಾತೇನಿಲ್ಲ.

ಎಲ್ಲಾ ದಾದಿಯರು ಬಹಳ ಒಳ್ಳೆಯ ಪಾತ್ರವನ್ನು ಮಾಡುತ್ತಿದ್ದೀರಿ. ಎಲ್ಲರ ಪಾತ್ರವನ್ನು ನೋಡಿ ಬಾಪ್‌ದಾದಾ ಖುಷಿಪಡುತ್ತಿದ್ದಾರೆ. (ನಿರ್ಮಲ ಶಾಂತ ದಾದಿಯ ಜೊತೆ) ಆದಿ ರತ್ನವಾಗಿದ್ದಾರಲ್ಲವೇ. ಅದಿರತ್ನ ಅಲ್ಲವೇ! ಅನಾದಿ ರೂಪದಲ್ಲಿಯೂ ನಿರಾಕಾರ ತಂದೆಯ ಸಮೀಪರಾಗಿ ಜೊತೆ- ಜೊತೆಯಲ್ಲಿದ್ದೀರಿ ಮತ್ತು ಆದಿರೂಪದಲ್ಲಿಯ ರಾಜ್ಯ ದರ್ಬಾರಿನ ಜೊತೆಗಾರರಾಗಿದ್ದೀರಿ. ಸದಾ ಘನತೆಯ ಕುಟುಂಬದ ಘನತೆಯುಳ್ಳಂತಹವರಾಗಿದ್ದೀರಿ ಮತ್ತು ಸಂಗಮಯುಗದಲ್ಲಿ ಆದಿರತ್ನ ಆಗುವ ಭಾಗ್ಯವು ಸಿಕ್ಕಿದೆ. ಅಂದಾಗ ಬಹಳ ದೊಡ್ಡ ಭಾಗ್ಯವಾಗಿದೆ. ಭಾಗ್ಯವಿದೆಯಲ್ಲವೇ. ತಮ್ಮ ಪ್ರತ್ಯಕ್ಷವಾಗುವುದೇ ಎಲ್ಲರಿಗೂ ವರದಾನವಾಗಿದೆ. ಹೇಳಿ ಅಥವಾ ಹೇಳದಿರಿ, ಮಾಡಿ ಅಥವಾ ಮಾಡದಿರಿ. ಆದರೆ ತಾವು ಪ್ರತ್ಯಕ್ಷವಾಗಿರುವುದೇ ಎಲ್ಲರಿಗೂ ವರದಾನವಾಗಿದೆ. ಒಳ್ಳೆಯದು.

ರಿವೈಸ್ ಕೋರ್ಸ್ 15-12-2002.

*ಸಮಯ ಪ್ರಮಾಣ ಲಕ್ಷ್ಯ ಮತ್ತು ಲಕ್ಷಣದ ಸಮಾನತೆಯ ಮೂಲಕ ತಂದೆಯ ಸಮಾನರಾಗಿರಿ.*

ಫರಿಶ್ತಾ ಆಗಬೇಕೆಂದರೆ ಮತ್ತು ನಿರಾಕಾರ ಕರ್ಮಾತೀತ ಸ್ಥಿತಿ ತಯಾರಾಗಬೇಕೆಂದರೆ ವಿಶೇಷ ಸಾಧನವು ನಿರಹಂಕಾರಿಯಾಗಬೇಕು, ನಿರಹಂಕಾರಿಗಳೇ ನಿರಕಾರಿ ಆಗಬಲ್ಲರು. ಕೇವಲ ಕರ್ಮಣಾ ಸೇವೆಯೇ ಅಲ್ಲ ಮನಸಾ, ವಾಚಾ, ಕರ್ಮಣಾ ಮೂರು ಸೇವೆಗಳನ್ನು ಮಾಡುತ್ತಿದ್ದೀರಿ. ಆದರೆ ಇನ್ನೂ ಹೆಚ್ಚಾಗಿ ಮಾಡಬೇಕು. ಕಳೆದು ಹೋದದ್ದೇನೋ ಹೋಗಿದೆ. ಇನ್ನು ಮುಂದೆ ಸೋಲಬಾರದು. ವಿಜಯವು ನಿಮ್ಮ ಕೊರಳಹಾರವಾಗಿದೆ. ನೀವು ಬಾಪ್‌ದಾದಾರವರ ಕೊರಳ ಹಾರವಾಗಿದ್ದೀರಿ. ಸೋಲುವ ಆತ್ಮರೂ ಕೋಟಿಗಟ್ಟಲೆ ಇದ್ದಾರೆ. ಆದರೆ ನೀವು ಕೋಟಿಯಲ್ಲಿ ಕೆಲವರು ಮತ್ತು ಆ ಕೆಲವರಲ್ಲಿ ಕೆಲವರು. ಪ್ರತಿಯೊಬ್ಬರೂ ನಿಮಗಿರುವ ಅವಕಾಶದಲ್ಲಿ ಅವಿನಾಶಿ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಂಡಿದ್ದೀರಿ. ಸ್ವಲ್ಪ ಸಮಯದ ಸೇವೆಯಿಂದ ಅನೇಕ ಜನ್ಮಗಳ ಪುಣ್ಯದ ರೇಖೆಯನ್ನು ಅಥವಾ ಭಾಗ್ಯವನ್ನು ತಯಾರು ಮಾಡಿಕೊಂಡಿದ್ದೀರಿ. ಎನ್ನುತ್ತಾ ಬಾಪ್‌ದಾದಾ ತನ್ನ ಸರ್ವಸ್ವಮಾನಧಾರಿ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವಶಕ್ತಿವಂತನಾದ ಪರಮಾತ್ಮನಿಂದ ಲಭಿಸಿರುವ ಸ್ವಮಾನ ಅರ್ಥಾತ್ ಟೈಟಲ್ಸ್ ನ ಆತ್ಮಿಕ ನಶೆಯಲ್ಲಿ ಲವಲಿನವಾಗಿದ್ದೇನೆ.

2. ನಾನು ಅಮೃತ ವೇಳೆ ಸ್ವಮಾನದ ಮಾಲೆಯನ್ನು ಧಾರಣೆ ಮಾಡುತ್ತಿದ್ದೇನೆ. ಅರ್ಥಾತ್ ಸ್ಮೃತಿಯಿಂದ ಆ ಸ್ಥಿತಿಯಲ್ಲಿ ಸ್ಥಿತವಾಗಿದ್ದೇನೆ.

3. ನನಗೆ ಸ್ವಮಾನದ ಮೇಲೆ ನಿಶ್ಚಯ (ಅರ್ಥಾತ್ ಜ್ಞಾನ ಪೂರ್ಣರಾಗಿ) ಮತ್ತು ಸ್ವಮಾನದ ಆತ್ಮಿಕ ನಷೆ (ಅರ್ಥಾತ್ ಶಕ್ತಿಶಾಲಿಯಾಗಿ)  ಎರಡರ ಸಮತೋಲನವಿದೆ.

4. ನಾನು ಜ್ಞಾನ ಪೂರ್ಣನಾಗಿದ್ದೇನೆ.

5. ನಾನು ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಾಗಿಟ್ಟುಕೊಂಡು ತಂದೆಯ ಸಮಾನವಾಗಿದ್ದೇನೆ.

6. ನಾನು ತಂದೆಯ ಸಮಾನವಾಗಿ, ದೇಹೀ ಅಭಿಮಾನಿಯಾಗುವುದನ್ನು ಸ್ವಾಭಾವಿಕ ಸ್ವಭಾವವನ್ನಾಗಿ ಮಾಡಿಕೊಂಡಿದ್ದೇನೆ.

7. ನಾನು ನಿರಹಂಕಾರಿಯಾಗಿ ಫರಿಶ್ತಾ ಮತ್ತು ನಿರಾಕಾರ ಕರ್ಮಾತೀತ ಸ್ಥಿತಿಯನ್ನು ತಯಾರು ಮಾಡಿಕೊಂಡಿದ್ದೇನೆ.

8. ನಾನು ಸ್ವಯಂನ ಅಥವಾ ಅನ್ಯರ ದೇಹದ ಅಭಿಮಾನ, ಆಕರ್ಷಣೆ ಮತ್ತು ಸೆಳೆತದಿಂದ ಅತೀತವಾಗಿದ್ದೇನೆ.

9. ನಾನು ಮನಸಾ, ವಾಚಾ, ಕರ್ಮಣಾ, ಸಂಭಂಧ ಸಂಪರ್ಕದಲ್ಲಿ ನಿರಾಕಾರಿ, ನಿರ್ವಿಕಾರಿ, ನಿರಹಂಕಾರಿ ಎಂಬ ಮೂರು ವಿಷಯಗಳನ್ನು ಸ್ಮೃತಿಯಲ್ಲಿ ಮತ್ತು ಸಮಾನತೆಯಲ್ಲಿ ಇಟ್ಟುಕೊಂಡಿದ್ದೇನೆ.

10. ನಿರಾಕಾರಿ, ನಿರ್ವಿಕಾರಿ, ನಿರಹಂಕಾರಿ ಎಂಬ ಮಹಾಮಂತ್ರವು ನನ್ನ ಸಂಕಲ್ಪವನ್ನು ಶ್ರೇಷ್ಠವಾಗಿ, ವಾಣಿಯಲ್ಲಿ ನಿರ್ಮಾಣತೆಯನ್ನು, ಕರ್ಮದಲ್ಲಿ ಸೇವಾ ಭಾವವನ್ನು, ಸಂಬಂಧ ಸಂಪರ್ಕದಲ್ಲಿ ಶುಭ ಭಾವನೆ, ಶ್ರೇಷ್ಠ ಕಾಮನೆಯ ವೃತ್ತಿಯನ್ನು ತಯಾರು ಮಾಡಿದೆ.

11. ನಾನು ವಾಚಾದೊಂದಿಗೆ ಪ್ರತಿಯೊಂದು ಆತ್ಮನಿಗೆ ಶಕ್ತಿಯ  ಕೋರ್ಸ್‌ಅನ್ನು ಕೊಟ್ಟಿದ್ದೇನೆ.

12. ನನ್ನ ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿಟ್ಟುಕೊಂಡು ಸಹಜವಾಗಿ ತಂದೆಯ ಸಮಾನವಾಗಿದ್ದೇನೆ.

13. ನಾನು ವಾರಸುಧಾರರ ಮಾಲೆ, ಕ್ವಾಲಿಟಿ ಆತ್ಮರನ್ನು, ಸಂಬಂಧ  ಸಂಪರ್ಕದಲ್ಲಿ ಇರುವವರನ್ನು ಮೈಕಾಗಿ ತಯಾರು ಮಾಡಿದ್ದೇನೆ.

14. ನಾನು ರಾಜಾ, ರಾಣಿಯೊಂದಿಗೆ ಅಲ್ಲಿಯ ರಾಜ್ಯ ದರ್ಬಾರಿನಲ್ಲಿ ರಾಜನ ಸಮಾನವಾಗಿ ಕುಳಿತುಕೊಳ್ಳುವವರನ್ನು ತಯಾರು ಮಾಡಿದ್ದೇನೆ.

15. ನಾನು ಮನಸಾ, ವಾಚಾ, ಕರ್ಮಣಾ 3 ಸೇವೆಗಳನ್ನು ಇನ್ನು ಹೆಚ್ಚಾಗಿ ಮಾಡುತ್ತಿದ್ದೇನೆ.

16. ನಾನು ಬ್ರಹ್ಮಕುಮಾರಿ, ಕುಮಾರನು ಎಂದು ಮನಸ್ಸಿನಲ್ಲಿ ಮತ್ತು ಅನುಭವದಿಂದ ಹೇಳುತ್ತಿದ್ದೇನೆ. (ಬುದ್ಧಿಯಿಂದ ಅಲ್ಲ)

17. ವಿಜಯವು ನನ್ನ ಕೊರಳಹಾರವಾಗಿದೆ, ನಾನು ಬಾಪ್‌ದಾದಾರವರ ಕೊರಳ ಹಾರವಾಗಿದ್ದೇನೆ, ನಾನು ವಿಜಯೀ ಪಾಂಡವನು.

18. ನಾನು ವಿಶ್ವ ಸೇವಾಧಾರಿ.

19. ನಾನು ಶಕ್ತಿ ಸ್ವರೂಪ.

20. ನಾನು ಕರ್ಮ ಮಾಡುತ್ತಿದ್ದರೂ ವಿಧಿಯನ್ನು ನಿರ್ವಹಿಸುತ್ತಿದ್ದರೂ ಒಂದು ಕ್ಷಣದಲ್ಲಿ ನಿರಾಕಾರಿ ಮತ್ತು ಫರಿಶ್ತಾ ಸ್ವರೂಪವಾಗಿ ಆತ್ಮಿಕ ವ್ಯಾಯಾಮವನ್ನು ಅಭ್ಯಾಸ ಮಾಡುತ್ತಿದ್ದೇನೆ.